ಈಗಾಗಲೇ ವ್ಯಾಪಕವಾಗಿ ವಿರೋಧಪಕ್ಷಗಳು ಬಹಳ ಕೋಆಪರೇಟಿವ್ ಆಗಿ ವರ್ತನೆ ಮಾಡಲಿಲ್ಲ ಎನ್ನುವಂತಹ ಮೇಸೇಜ್ ಹೋಗಿದೆ. ದಯವಿಟ್ಟು, ಮಾನ್ಯ ಹಿರಿಯ ಸಚಿವರು ಈ ಸದನದಲ್ಲಿ ಎಲ್ಲರೂ ಕೋಆಪರೇಟೀವ್ ಆಗಿ ಕೆಲಸ ಮಾಡಿದ್ದಾರೆ. ಎನ್ನುವಂತಹ ಒಂದು ಮಾತು ಹೇಳಿ, ಆ ಮಾತು ಹೋಗಿದ್ದರೆ ಚೆನ್ನಾಗಿತ್ತು.

ಅಧ್ಯಕ್ಷರು :- ಇರಲಿ. ಬಿಡಿ. ಒಟ್ಟಿನಲ್ಲಿ ನಾನು ಹೇಳುವುದು ಇಷ್ಟೇ. ಮಾನ್ಯ ಶ್ರೀ ಕಂಠಯ್ಯನವರು ನಾನು ಯಾವಾಗಲೂ ಆ ರೀತಿ ಮಾತನಾಡಲಿಲ್ಲ ಎಂದು ಹೇಳಿದ ಮೇಲೆ ನಾವು ಪುನಃ ಅದನ್ನು ರೈಸ್ ಮಾಡುವುದು ಚೆನ್ನಾಗಿರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಶ್ರೀಕಂಠಯ್ಯನವರು ಪತ್ರಿಕಾ ವರದಿಗಾರರ ಬಗ್ಗೆ ಕೇರ್‌ಫುಲ್ ಆಗಿ ಇರಲಿ ಎಂದು ಹೇಳುತ್ತೇನೆ. ಏಕೆಂದರೆ ಇದು ಎರಡನೇ ಸಲವೋ ಮೂರನೆಯ ಸಲವೋ ಈ ರೀತಿ ಆಗುತ್ತಿರುವುದು.

ಅಧ್ಯಕ್ಷರು :- ಈಗ ಅವರು ಬಹಳ ಕೇರ್‌ಫುಲ್ ಆಗಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಬೇಜವಾಬ್ದಾರಿಯಿಂದ ಮಾತನಾಡಿದರು ಎಂದು ಮಾನ್ಯ ಸಿಂಧ್ಯಾರವರು ಹೇಳಿದರು. ನಾನು ಪಕ್ಕದಲ್ಲೇ ಸ್ವಲ್ಪ ದೂರದಲ್ಲಿದ್ದೆ. ಅವರು ಏನೂ ಅಂತಹ ಮಾತನ್ನು ಹೇಳಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಉದಯ ಟಿವಿಯಲ್ಲಿ ಬಂದಿದೆ, ಅದನ್ನು ತರಿಸಿ ನೋಡಿ.

ಅಧ್ಯಕ್ಷರು :- ಆಯಿತು ಬಿಡಿ, ಆ ವಿಷಯವನ್ನು ಅಲ್ಲಿಗೆ ಬಿಟ್ಟು ಬಿಲ್ಸ್ ತೆಗೆದುಕೊಳ್ಳೋಣ

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರೂ ತಪ್ಪು...

ಅಧ್ಯಕ್ಷರು :- ಇಲ್ಲಿ ಹೈಪಾಥಿಟಿಕಲ್ ಕ್ವೊಶ್ಚನ್ಸ್ ಬೇಡ, ನೀವು ಒಂದು ಹೇಳುತ್ತೀರಿ, ಅವರೊಂದು ಹೇಳುತ್ತಾರೆ. There is no end for all those hypothetical questions.

2. ವರದಿಗಳನ್ನು ಒಪ್ಪಿಸುವುದು.

ಶ್ರೀ ಕೆ.ಬಿ. ಚಂದ್ರಶೇಖರ್ (ಕೃಷ್ಣರಾಜಪೇಟೆ) :- ಮಾನ್ಯ ಅಧ್ಯಕ್ಷರೆ, 2001-02ನೇ ಸಾಲಿನ ಸರ್ಕಾರಿ ಭರವಸೆಗಳ ಸಮಿತಿಯ ಮೂರನೇ, ನಾಲ್ಕನೇ, ಐದನೇ ಹಾಗೂ ಆರನೇ ವರದಿಗಳನ್ನು ಸಮಿತಿಯ ಅಧ್ಯಕ್ಷರ ಪರವಾಗಿ ನಾನು ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :- ಮಾನ್ಯ ಅಧ್ಯಕ್ಷರೆ, 2001-02ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿಯ ಎರಡನೇ ವರದಿಯನ್ನು ಸಮಿತಿಯ ಅಧ್ಯಕ್ಷರ ಪರವಾಗಿ ನಾನು ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ವಿವೇಕಾನಂದ ವೈದ್ಯ (ಸಿರ್ಸಿ) :- ಮಾನ್ಯ ಅಧ್ಯಕ್ಷರೆ, 2001-02ನೇ ಸಾಲಿನ ಅಧೀನ ಶಾಸನ ರಚನಾ ಸಮಿತಿಯ ಇಪ್ಪತ್ತೆಂಟನ್ ವರದಿಯನ್ನು ಸಮಿತಿಯ ಅಧ್ಯಕ್ಷರ ಪರವಾಗಿ ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ಬಿ. ಶಿವಪ್ಪ (ಸಕಲೇಶಪುರ) :- ಮಾನ್ಯ ಅಧ್ಯಕ್ಷರೆ, 2001-02ನೇ ಸಾಲಿನ ಅಧೀನ ಶಾಸನ ರಚನಾ ಸಮಿತಿಯ ಇಪ್ಪತ್ತೆಂಟನೇ ವರದಿಯನ್ನು ಸಮಿತಿಯ ಅಧ್ಯಕ್ಷರ ಪರವಾಗಿ ಸದನಕ್ಕೆ ಒಪ್ಪಿಸುತ್ತೇನೆ.

ಶ್ರೀ ಎ. ರಾಮದಾಸ್ (ಕೃಷ್ಣರಾಜ) :- ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ಅಧ್ಯಕನಾದ ನಾನ ಸಮಿತಿಯ ಎಂಟನೇ, ಒಂಭತ್ತನೇ, ಹತ್ತನೇ ಹಾಗೂ ಹನ್ನೊಂದನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು :- ಸಮಿತಿಯ ವರದಿಗಳನ್ನು ಒಪ್ಪಿಸಲಾಯಿತು.